ನಾವು ಕಬಡ್ಡಿ ಆಡಾಕ್ ಬರ್‍ತೀವಿ' ಎಂದಳು, ಆದರೆ ಎಲ್ಲ ಗೆಳತಿಯರದೂ ಒಂದೇ ಮನಸ್ಸಾಗಿರಲಿಲ್ಲ. ಕಬಡ್ಡಿ ಆಡ್ತಾ ಬಟ್ಟೆ ಹರಿದೋದ್ರೆ ಅನ್ನೋ ಆತಂಕ ಅವರದು. ಅದನ್ನು ಹೇಳಿಯೂ ಬಿಟ್ಟರು. ಈಗ ಗಾಂಧಿ ತುಂಟು ನಗೆಯಲ್ಲಿ ಕಸ್ತೂರ್ ಕಡೆ ನೋಡಿದ. ಕಸ್ತೂರ್‌ಗೆ ಆ ನಗುವಿನ ಅಣಕು ಅರ್ಥವಾಯಿತು. 'ಬಟ್ಟೆ ಮುಟ್ಟ ಎಳೀದೆ ಇರೊ ಥರಾ ಹೊಸಾ ರೀತಿ ರೂಲ್ ಮಾಡಿದ್ರಾಯ್ತು' ಎಂದಳು ಕಸ್ತೂರ್. ಅದಕ್ಕೆ ಕೆಲ ಹುಡುಗರದೂ ಒಪ್ಪಿಗೆಯಿಲ್ಲ. ಹುಡುಗಿಯರಿಗೂ ಹಿಂಜರಿಕೆ. ಈಗ ಕಸ್ತೂರ್‌ಗೆ ಮರ್ಯಾದೆಯ ಪ್ರಶ್ನೆ. ಹಿಂದಡಿಯಿಟ್ಟರೆ ನಗೆಪಾಟಲಾಗುತ್ತದೆ. ಗೆಳತಿಯರನ್ನು ಸ್ವಲ್ಪ ದೂರ ಕರೆದೊಯ್ದಳು. 'ನನ್ ಮರ್ಯಾದೆ ಉಳುಸ್ರೇ. ಒಪ್ಪಳಿ, ನಾಳೆ ಬೇರೆ ಏನಾದ್ರೂ ಆಡಿದ್ರಾಯ್ತು. ಇವತ್ತು ನನಿಗ್ ಮುಖಭಂಗ ಆಗ್‌ಬಾರದು' ಎಂದು ಪರಿಪರಿಯಾಗಿ ಹೇಳಿದ ಮೇಲೆ ಒಬ್ಬಾಕೆ, 'ಆಯ್ತು ಕಣೇ, ನಿನ್ ಮಾತಿಗ್ ಬೆಲೆ ಕೊಡ್ತೀವಿ. ಅವ್ರೇನಾರ ನಮ್ ಬಟ್ಟೆ ಮುಟ್ಟಿದ್ರೆ ಅವ್ರೇ ಔಟ್ ಅಂತ ರೂಲ್ ಮಾಡಬೇಕು, ಒಪ್ಪಿಸು ನೀನು' ಎಂದಳು. ಇನ್ನೊಬ್ಬಾಕೆ, 'ಬಟ್ಟೆ ಹರ್ಕಂಡ್ ಮನೇಗೋದ್ರೆ ಹಿರಿಯರು ನಮ್ಮನ್ ಹುರ್ದು ಮುಕ್ ಬಿಡ್ತಾರೆ ಅಷ್ಟೇ' ಎಂದು ಗೊಣಗಿದಳು. ಮತ್ತೊಬ್ಬಾಕೆ, 'ಕಸ್ತೂರ್ ಮಾನ ಉಳ್ಸಾನ ಬನ್ರೇ' ಎಂದಳು. ಇವರೆಲ್ಲ ಹೋಗುವ ವೇಳೆಗೆ ಅಲ್ಲಿ ಗಾಂಧಿ ತನ್ನ ಗೆಳೆಯರಿಗೆಲ್ಲ ಏನೋ ಹೇಳುತ್ತಿದ್ದು, ಇವರು ಬಂದವರೇ ತಮ್ಮ ನಿಲುವು ಹೇಳಲು ಆರಂಭಿಸಿದರು. ಗಾಂಧಿ 'ಸ್ವಲ್ಪ ತಡೀರಿ' ಎಂದ. 'ಇವಾಗೇನು, ಹುಡುಗ್ರೂ ಹುಡಿಗೇರು ಒಂದೇ ಆಟ ಆಡ್‌ಬೇಕಲ್ವ? ನಾವು ಮಾತಾಡ್ಕೊಂಡಿದ್ದೀವಿ. ನಾವೇ ನಿಮ್ ಜೊತೆ ಕುಂಟಾಬಿಲ್ಲೆ ಆಡ್ತೀವಿ' ಎಂದು ಪ್ರಕಟಿಸಿದ. ಕಸ್ತೂರ್ ಹೊರತಾಗಿ ಇತರೆ ಹುಡುಗಿಯರು ಹೋ ಎಂದು ಸಂಭ್ರಮಿಸಿದರು. ಹೇಳದೆ ಕೇಳದೆ ಕುಂಟಾಬಿಲ್ಲೆಗೆ ಗೆರೆ ಎಳೆಯಲು ಹೋದರು. ಗಾಂಧಿ ಕಸ್ತೂರ್ ಕಡೆ ನೋಡಿ ತುಂಟ ನಗೆ ಬೀರಿದ.

* * *

ಇನ್ನೊಂದು ದಿನವೂ ಕಬಡ್ಡಿ ಪ್ರಸ್ತಾಪ ಬಂತು, ಆದರೆ ಹಿಂದಿನ ದಿನದ ಅನುಭವ ಬೇರೆ ಇತ್ತು. ಗಾಂಧಿಯೇ ಮುಂದಾಗಿ 'ಎಲ್ರೂ ಇವತ್ತು ಈ ಮರಳು, ಮಣ್ಣು ಬಳಿಸ್ಕೊಂಡು ಮನೆ ಕಟ್ಟೋ ಆಟ ಆಡೋಣ' ಎಂದ. ಕಸ್ತೂರ್ ಕಡೆ ನೋಡಿದ. ಕಸ್ತೂರ್ ಉತ್ತರಿಸುವುದಕ್ಕೆ ಮುಂಚೆಯೇ ಇತರರು ಹೋ ಎಂದರು.

ಗಾಂಧಿ ಆಟಕ್ಕೆ ಕಸ್ತೂರ್ ಚಿತ್ತಾದಂತೆ ಕಂಡಳು. ಮಾತಾಡಲಿಲ್ಲ. ಮನೆಕಟ್ಟುವ ಆಟ ಆಕೆಗೆ ಇಷ್ಟವೇ. ಆದರೆ ಗಾಂಧಿ ತನ್ನ ಅಭಿಪ್ರಾಯಕ್ಕೆ ಅವಕಾಶವನ್ನೇ ಕೊಡದೆ ಏಕಪಕ್ಷೀಯ ಘೋಷಣೆ ಮಾಡಿದ್ದು ಗಲಿಬಿಲಿ ಹುಟ್ಟಿಸಿತ್ತು. ಆದರೆ ಅದನ್ನು ತೋರಗೊಡದೆ ತಾನೂ ಒಪ್ಪಿಕೊಂಡಂತೆ ಮಾಡಿ, 'ಮನೆಕಟ್ಟೋದು ಒಂದು ಕಲೆ. ಅದಕ್ಕಾಗಿ ನಂಗೂ ಇಷ್ಟ' ಎಂದಳು. ಗಾಂಧಿ ಪಟ್ಟು ಬಿಡೋದುಂಟ? ಥಟ್ಟನೆ ಹೇಳಿಬಿಟ್ಟ:

'ಕಲೆ ಅಂದ್ರೆ ಸಾಲ್ದು, ತಲೆ ಬೇಕು ತಲೆ.'

ಕಸ್ತೂರ್ ಸುಮ್ಮನಿರೋದುಂಟ? ಎದುರುತ್ತರ ಸಿದ್ಧವಾಗಿತ್ತು:

'ತಲೆ ಎಲ್ರಿಗೂ ಇರುತ್ತೆ. ಆದ್ರೆ ಕಲೆ ಎಲ್ರಲ್ಲೂ ಇರೊಲ್ಲ.'

ಗಾಂಧಿಯೂ ಸುಮ್ಮನಿರುವ ಆಸಾಮಿಯಲ್ಲ. ತಕ್ಷಣ ಪ್ರತಿಕ್ರಿಯಿಸಿದ: 'ತಲೆ ಇದ್ರೇನಂತೆ? ಅದ್ರೊಳಗಡೆ ಬುದ್ಧಿ ಇರ್ ಬೇಕಲ್ಲ ಬುದ್ಧಿ?'

ಇವರ ವಾದಸರಣಿ ಕಂಡು ಗೆಳೆಯರಿಗೆ ಬೇಸರವಾಯಿತು.

ಒಬ್ಬ, 'ನೀವೇನ್ ಮನೆ ಕಟ್ತೀರೊ. ಇಲ್ಲ ಜಗಳ ಆಡ್ಕಂಡೇ ಮನೆ ತಲುಪ್ತೀರೊ?' ಎಂದು ಕೇಳಿಯೇ ಬಿಟ್ಟ. ಆಗ ಗಾಂಧಿ, 'ತಪ್ಪಾಯ್ತು ಗೆಳೆಯ, ಬನ್ನಿ ಎಲ್ಲ ಮನೆ ಕಟ್ಟೋಣ' ಎಂದು ಎಲ್ಲರನ್ನೂ ಕರೆದ.

ಮನೆ ಕಟ್ಟಲು ಶುರುಮಾಡಿದರು. ಒಂದು ಪಾದವನ್ನ ಮುಂದಿಟ್ಟು ಅದರ ಮೇಲೆ ಮರಳು ಮಣ್ಣು ಹಾಕಿ, ನಿಧಾನವಾಗಿ ತಟ್ಟಿ, ಅದು ಬಂದೋಬಸ್ತ್ ಆದಾಗ ಪಾದವನ್ನು ಹೊರತೆಗೆದರು. ಮರಳುಮಣ್ಣು ಬೀಳದೆ ಹಾಗೇ ನಿಂತಿರುತ್ತದೆ. ಮೊದಲು ಮನೆಕಟ್ಟಿದವರು ಕಸ್ತೂರ್ ತಂಡದವರು. ಕಸ್ತೂರ್ ಖುಷಿಯಿಂದ ಹೇಳಿದಳು:

'ನೋಡಿ, ನಾವ್ ಮನೆ ಕಟ್ಟೋದನ್ನ ಮೊದ್ಲೇ ಮುಗ್ಸಿದ್ವಿ. ಮನೆ ಕಟ್ಟೋಕೆ ಹೆಂಗಸ್ರೇ ಸರಿ.'

ಆಗ ಗೆಳತಿಯರೆಲ್ಲ ಸಂಭ್ರಮದಿಂದ ಹೋ ಎಂದು ಕೂಗಿದರು. ಒಬ್ಬ ಹುಡುಗನಿಗೆ ಸಿಟ್ಟು ಬಂತು. ಇದು ಅವಮಾನದಿಂದ ಹುಟ್ಟಿದ ಸಿಟ್ಟು. ಕೂಡಲೇ ಹಿಂದೆ ಮುಂದೆ ನೋಡದೆ ಬಂದು ಕಸ್ತೂರ್ ಕಟ್ಟಿದ್ದ ಮನೆಗೆ ಒದ್ದುಬಿಟ್ಟ.

ಮರಳು ಮಣ್ಣಿನ ಮನೆ ಕುಸಿದುಬಿತ್ತು.
ಪುರುಷ ಮುಳ್ಳಿನ ಮೊನೆ ಚುಚ್ಚಿತ್ತು.
ಅಸಹನೆಯ ಎದುರು ಅಸಹಾಯಕತೆ
ಕಣ್ಣು ತುಂಬಿದ ವ್ಯಥೆಯ ಕತೆ!

ಗಾಂಧಿ ತನ್ನ ಗೆಳೆಯನ ಕೃತ್ಯದಿಂದ ಕುಪಿತನಾದ; ಕಸ್ತೂರ್ ಕಣ್ಣಲ್ಲಿ ಕಣ್ಣೀರು ಕಂಡು ಕನಲಿದ. ಮನೆಕೆಡವಿದ ಗೆಳೆಯನ ಹತ್ತಿರ ಬಂದ.

ಹಾಳಾದೋನೇ ಅನ್ಯಾಯವಾಗ್ ಇವ್ರ್ ಮನೆ ಕೆಡವಿಬಿಟ್ಟೆಲ್ಲೋ ಎಂದು ಕೊರಳಪಟ್ಟಿ ಹಿಡಿದ. ಆ ಗೆಳೆಯನೇನೂ ಸುಮ್ಮನಿರಲಿಲ್ಲ. 'ಬಿಡೊ' ಎಂದ. ಈತ ಬಿಡೊಲ್ಲ. ಕ್ಷಮೆಕೇಳು ಎಂದು ಒತ್ತಾಯಿಸಿದ. ಆತ ಸಿದ್ಧನಿರಲಿಲ್ಲ. 'ಓ ಅದೇನ್ ಮಹಾ ಬಂಗಲೇನ? ಮರಳಲ್ ಕಟ್ಟಿದ್ ಮನೆ' ಎಂದು ಹೀಗಳೆದ.

ಆಗ ಗಾಂಧಿ 'ಈ ಮರಳಿನ್ ಮನೆ, ಮನಸಿನ್ ಮನೆ ಕಣೊ; ಕನಸಿನ್ ಮನೆ. ಇದನ್ ಕಟ್ಟುವಾಗ ಇವ್ರ್ ಮನ್ಸಲ್ಲಿ ಏನೆಲ್ಲ ಆಗಿರುತ್ತೆ ಗೊತ್ತ ನಿಂಗೆ?. ಅದಕ್ಕೇ ಕಸ್ತೂರ್ ಹೇಳಿದ್ದು – ಹೆಂಗಸ್ರೇ ಸರಿ ಮನೆ ಕಟ್ಟೋಕೆ ಅಂತ. ಮನೆ ಕಟ್ಟೋಕ್ ಹೆಂಗಸ್ರು, ಕೆಡವೋಕ್ ಗಂಡಸ್ರು ಅಂತ ಆಗ್ ಬಾರ್ದು ಕಣೋ' ಎಂದು ತೀವ್ರವಾಗಿ ನುಡಿದು,

'ಕ್ಷಮೆ ಕೇಳು. ಇಲ್ದಿದ್ರೆ ನಾನ್ ಸುಮ್ನಿರೊಲ್ಲ' ಎಂದ. 'ಏನ್ ಮಾಡ್ತೀಯ? ಹೊಡೀತೀಯ ನನ್ನ?' ಎಂದು ಗೆಳೆಯ ಕೆಣಕಿದ. ಆಗ ಕಸ್ತೂರ್ ಮಧ್ಯಪ್ರವೇಶಿಸಿ, 'ಇರ್ಲಿ, ಬಿಟ್‌ಬಿಡು ಅವ್ನನ್ನ. ಅವ್ನ್ ಕ್ಷಮೆ ಕೇಳೊಬದ್ಲು ನಾವೇ ಅವ್ನನ್ ಕ್ಷಮಿಸ್ ಬಿಡೋಣ. ಎಲ್ರೂ ಮತ್ತೆ ಸ್ನೇಹಿತ್ರಾಗೋಣ' ಎಂದಳು.

ಗಾಂಧಿ ಕೊರಳ ಪಟ್ಟಿ ಬಿಟ್ಟ.
ಗೆಳೆಯನ ಕರುಳ ತಟ್ಟಿತು ಕಸ್ತೂರ್ ಮಾತು.
ಕೆರಳಿದ್ದ ಕೊರಳು ಮೌನವಾಯಿತು;
ಕಣ್ಣಲ್ಲಿ ನುಡಿ ನೀರಾಯಿತು.
ಕೈಗಳೊಂದಾಗಿ ನಮನವಾಯಿತು.

ಯಾರೂ ಮಾತಾಡಲಿಲ್ಲ. ಕೈ ಕೈ ಹಿಡಿದುಕೊಂಡರು. ಎಲ್ಲರೊಂದಾಗಿ ಮನೆಗೆ ಹೊರಟರು. ಮುಗಿಲಲ್ಲಿ ಮೋಡಗಳು ಮುತ್ತಿಕೊಂಡು ಇವರೊಳಗಿನ ದುಗುಡ ದುಮ್ಮಾನಕ್ಕೆ ಪ್ರತಿಬಿಂಬದಂತೆ ಕಾಣಿಸಿದವು. ಮಳೆ ಬರುವುದಕ್ಕೆ ಮುಂಚೆ ಮನೆಸೇರುವ ತವಕ. ಅಷ್ಟರಲ್ಲಿ ಹನಿ ಆರಂಭ, ಕಸ್ತೂರ್ ಹಾಗೇ ನಿಂತಳು. ಓಡಬೇಕೆಂದಿದ್ದವರಿಗೆ ಆಶ್ಚರ್ಯ. ಕಸ್ತೂರ್‌ಗೆ ಅರ್ಥವಾಯಿತು.

'ನಾನ್ ಮಳೇಲ್ ನೆನೀತೀನಿ' ಎಂದಳು. 'ಏನಾಗಿದೆ ಇವತ್ತು ನಿಂಗೆ?' ಎಂದು ಪ್ರಶ್ನಿಸಿದಳು ಗೆಳತಿ. 'ನಮ್ಮನೇಲಿ ಹೇಳ್ತಾ ಇದ್ರು – ಮಳೆ ಅಂದ್ರೆ ದೇವರು ಅಂತ – ದೇವರ ಆಶೀರ್ವಾದ ಅಂತ ನೆನೀತೀನಿ. ನೀವ್ ಬೇಕಾದ್ರೆ ಹೋಗಿ' ಎಂದಳು ಕಸ್ತೂರ್. ಆಗ ಗಾಂಧಿ ನಗುತ್ತಾ 'ದೇವರ ಆಶೀರ್ವಾದ ನಿನಗೊಬ್ಬಳಿಗೇನ? ನಮಗೂಬೇಕು. ಗಂಡಸ್ರು, ಹೆಂಗಸ್ರು ಅನ್ನೋ ವ್ಯತ್ಯಾಸ ಇಲ್ದೇ ಎಲ್ರಿಗೂ ಬೇಕು' ಎಂದು ಹೇಳುತ್ತಾ ಮಳೆಯ ಹನಿಗಳಿಗೆ ಅಂಗೈ ಇಟ್ಟು ಆಟವಾಡುತ್ತ ನೆನೆಯ ತೊಡಗಿದಾಗ ಎಲ್ಲರೂ ನೆನೆದರು; ಕುಣಿದರು.

ಮತ್ತೊಂದು ದಿನ ಹೀಗೇ ಆಟಕ್ಕೆ ಹೊರಟರು. ಕಸ್ತೂರ್ ಬಳಗ ಗಾಂಧಿ ಮನೆಯ ಬಳಿಯೇ ಬಂದಿತ್ತು. ಅಲ್ಲೊಂದು ಘಟನೆ ನಡೆಯಿತು. ಅಸ್ಪೃಶ್ಯನೊಬ್ಬ ಗಾಂಧಿಮನೆಯ ಮಲದ ಮಡಕೆಯನ್ನು ಹೊತ್ತು ಹೋಗುತ್ತಿದ್ದ. ಗಾಂಧಿ ಸೀದಾ ಆತನ ಹತ್ತಿರ ಹೋದ. ಕೈ ಹಿಡಿದು, 'ನೀನು ಹೀಗೆಲ್ಲ ನಮ್ಮ ಮಲ ಹೊರೋದು ನಂಗ್ ತುಂಬಾ ನೋವ್ ಮಾಡುತ್ತೆ' ಎಂದ. ಅಸ್ಪೃಶ್ಯ 'ಏನ್ ಮಾಡಾದು ಸ್ವಾಮಿ. ನಮ್ ಕುಲ ಕಸುಬು ಇದು, ನಮ್ ಹೊಟ್ಟೆಪಾಡು' ಎಂದು ಉತ್ತರಿಸಿದ. 'ಆದ್ರೂ ಇದು ತಪ್ಪು' ಎಂದ ಗಾಂಧಿ. ಆತ 'ತಪ್ಪು ನಂದಾ?' ಎಂದು ಕೇಳಿದ. ಗಾಂಧಿ ಕೂಡಲೇ 'ಛೇ ಛೇ! ನಿಂದಲ್ಲ, ನಮ್ ಮನೆಯೋರ್ದು. ಇವತ್ತೆ ನಮ್ಮಮ್ಮಂಗ್ ಹೇಳ್ತೀನಿ. ನಮ್ ಮಲ ನಾವೇ ತೆಗಿಯೋಣ ಅಂತ' ಎಂದು ಸಮಜಾಯಿಷಿ ನೀಡಿದ., ಅಸ್ಪೃಶ್ಯನಿಗೆ ಗೊಂದಲ.

'ಅಂದ್ರೆ ನನ್ ಕೆಲ್ಸ ಕಳೀತೀರಾ ಸ್ವಾಮಿ? ನನ್ ಹೊಟ್ಟೆ ಮೇಲ್ ಹೊಡೀತೀರಾ?' ಎಂದು ಕೇಳಿದಾಗ ಗಾಂಧಿ ತಬ್ಬಿಬ್ಬು! 'ಹಾಗಲ್ಲ, ಅಪ್ಪಂಗ್ ಹೇಳಿ ನಿಂಗ್ ಬೇರೆ ಯಾವ್ದಾದ್ರೂ ಕೆಲ್ಸ ಕೊಡುಸ್ತೀನಿ. ಹೇಗಿದ್ರು ನಮ್ಮಪ್ಪಂಗೆ ದಿವಾನ ಅಂತ ಅದೇನೊ ಒಂದ್ ಕೆಲ್ಸ ಇದೆ ರಾಜಕೋಟಲ್ಲಿ' ಎಂದು ಗಾಂಧಿ ಸಂಭ್ರಮಿಸಿ ಹೇಳಿದಾಗ ಆತ ತಣ್ಣಗೆ ಹೇಳಿದ:

(ಸಶೇಷ)